**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 101/2018**

| | | | |
|---|---|---|---|
| **ಹೆಸರು** | **:** | **ಪ್ರಭು ದುದ್ಗಿ** | **ಚಾ.ಸಾ.23** |
| **ಗಂಡನ ಹೆಸರು** | **:** | **ಭೋಜಪ್ಪ** | **ಪ್ರಾ.ಸಾ.16** |
| **ವಯಸ್ಸು** | **:** | **65 ವರ್ಷ** | **ದಿನಾಂಕಃ 04-12-2023** |
| **ಉದ್ಯೋಗ** | **:** | **ನಿವೃತ್ತ ಸಿಪಿಐ** | |
| **ವಾಸಸ್ಥಳ** | **:** | **ಗುಲಬರ್ಗಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

2017 ರಿಂದ 2018 ರ ವರೆಗೆ ಸುಲೇಪೇಟದಲ್ಲಿ ಸಿಪಿಐಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕ 14-02-2017 ರಂದು ಪ್ರಕರಣದ ಕಡತವನ್ನು ಚಾಸಾ-22 ರವರಿಂದ ಪಡೆದುಕೊಂಡಿದ್ದೇನೆ. ಅದೇ ದಿನ ಬೆಳಗ್ಗೆ ರಾಯಕೋಡ ಗ್ರಾಮಕ್ಕೆ ಹೋಗಿ ಪ್ರಾಸಾ-8, 5, 7, 6, 11, 12 ಮತ್ತು 15 ಹಾಗೂ ಚಾಸಾ12 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ನಂತರ ರುದ್ರನೂರು ಗ್ರಾಮಕ್ಕೆ ಹೋಗಿ ಪ್ರಾಸಾ-10 ಮತ್ತು ಚಾಸಾ-16 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ದಿನಾಂಕ 16-10-2017 ರಂದು ಆರೋಪಿತರು ಜಿಲ್ಲಾ ನ್ಯಾಯಾಲಯದಿಂದ ಜಾಮೀನನ್ನು ಪಡೆದು ಠಾಣೆಗೆ ಹಾಜರಾಗಿರುತ್ತಾರೆ. ನಂತರ ಆರೋಪಿತರನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 05-12-2017 ರಂದು ನಿಪಿ-10 ರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ. ಅದೇ ದಿನ ತನಿಖೆ ಪೂರ್ಣ ಗೊಳಿಸಿ ಮಾನ್ಯ ನ್ಯಾಯಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ. ಆರೋಪಿತರಲ್ಲಿ 1 ನೇ ಆರೋಪಿಯನ್ನು ನಾನು ಗುರುತಿಸುತ್ತಿದ್ದೇನೆ. ಉಳಿದ ಆರೋಪಿತರು ಗೈರು ಹಾಜರಿರುವ ಕಾರಣ ಗುರುತಿಸಲು ಆಗಿರುವುದಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಸ್.ಎನ್.ಬಿ. ವಕೀಲರಿಂದಃ-**

ಎಷ್ಟು ದಿನದ ವರೆಗೆ ಪ್ರಾಸಾ-3 ರವರ ಆಸ್ಪತ್ರೆಯಲ್ಲಿ ಇದ್ದ ಬಗ್ಗೆ ಮತ್ತು ಅವರು ಆಸ್ಪತ್ರೆಯಿಂದ ಯಾವ ದಿನಾಂಕದಂದು ಬಿಡುಗಡೆಯಾದ ಬಗ್ಗೆ ನಾನು ದಾಖಲೆಯನ್ನು ಪಡೆದುಕೊಂಡಿಲ್ಲ. ನಾನು ಪ್ರಾಸಾ-3 ರವರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಆದರೆ ಅವರ ಮನೆಗೆ ಹೋಗಿ ವಿಚಾರಣೆ ಮಾಡಿದ್ದೇನೆ. ನಾನು ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

ಆರೋಪಿತರಿಗೆ ಸತಾಯಿಸಲು ಮತ್ತು ಪ್ರಾಸಾ-3 ರವರಿಗೆ ಸಹಾಯ ಮಾಡಲು ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. 1 ನೇ ಆರೋಪಿ ವರದಕ್ಷಿಣೆ ಕೇಳಿಲ್ಲ ಮತ್ತು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**